ಜನರಿಗೆ ಕಾಂಟ್ರಾಕ್ಟ್ ಕೊಟ್ಟಿದ್ದರೆಂಬ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.— ಗೊತ್ತಿಲ್ಲ.

ಶ್ರೀ ಬಿ. ಸಿ. ನಂಜುಂಡಯ್ಯ.—ಸರ್ಕಾರಕ್ಕೆ ಇದರಿಂದ ನಷ್ಟವಾಗುತ್ತಿದ್ದರೂ ಇದನ್ನೊಂದು ಕಾಜೇಜ್ ಇಂಡಸ್ಟ್ರಿಯನ್ನಾಗಿ ಕೈಕೊಳ್ಳಲಾಗಿರುತ್ತೆಂದು ಹೇಳಿದಿರಿ. ಆದರೆ ಇನ್ನು ದೇಶದಲ್ಲಿ ಇದಕ್ಕಿಂತಲೂ ಹೆಚ್ಚಿನ ಉತ್ಪೇಜನಪಡೆಯಲು ಅರ್ಹತೆ ಇರುವಂಥ ಇಂಡಸ್ಟ್ರಿಗಳಾವುವೂ ಇರುವುದಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಬಿ. ಸಿ. ನಂಜುಂಡಯ್ಯ.—ಈಗ ತಾವು ಈ ಉದ್ಯಮವನ್ನು ಕೈಕೊಳ್ಳುವ ಬದಲು ಇದನ್ನು ಖಾಸಗಿಯವರಿಗೆ ಒಪ್ಪಿಸಿದರೆ ಆಗ ಈ ಇಂಡಸ್ಟ್ರಿ ಇನ್ನೂ ಹೆಚ್ಚಿನ ಅಭಿವೃದ್ಧಿಗೆ ಬರಬಹುದಲ್ಲವೇ ?

ಶ್ರೀ ಟಿ. ಚನ್ನಯ್ಯ.—ಆ ವಿಚಾರ ಕೂಡ ನಮ್ಮ ಗಮನದಲ್ಲಿದೆ. ಅದೆಲ್ಲವನ್ನೂ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈಗ ತಾವು ಈ ಅರಗನ್ನು ತಯಾರಿಸುವ ಮರಗಳು 2,000 ಮಾತ್ರ ಇರುತ್ತವೆಂದು ತಿಳಿಸಿದ್ದೀರಿ. ಈ ಮರಗಳನ್ನು ಬೇರೆಯವರಿಗೆ ಕೊಟ್ಟು, ಅದರಿಂದ ಬರುವ ರಾಯಲ್ಟಿಯನ್ನು ಪಡೆದುಕೊಂಡರೆ ಈ ಕೈಗಾರಿಕೆಗಿಂತಲೂ ಹೆಚ್ಚಿನ ಫಾಯಿದೆ ಬರುತ್ತೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

Sri T. CHANNIAH.—All these aspects will be examined.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈಗ ಅರಗಿನ ಬೆಳೆಯನ್ನು ಹೆಚ್ಚಿನತಕ್ಕ ಬಗ್ಗೆ ಯಾವುದಾದರೂ ಇಲಾಖೆ ಇದೆಯೇ ?

ಶ್ರೀ ಟಿ. ಚನ್ನಯ್ಯ.—ಮೈಸೂರಲ್ಲರುವ Paint and Lac Works ಕಂಪೆನಿಗೆ ಫಾರೆಸ್ಟ್ ಇಲಾಖೆಯ ಮೂಲಕ ಈಗ ಈ ಅರಗನ್ನು ಸರಬರಾಯಿ ಮಾಡಲಾಗುತ್ತಿದೆ. ಆದರೆ ಹಳ್ಳಿ ಜನರಿಗೆ ಕೂಲಿಯನ್ನೊದಗಿಸುವ ಉದ್ದೇಶದಿಂದ ನಾವೀಗ ಈ ಕೈಗಾರಿಕೆಗೆ ಉತ್ಪೇಜನಕೊಡುತ್ತಿದ್ದೇವೆ.

ಶ್ರೀ ಎಸ್. ಸಿದ್ದಪ್ಪ.—ಹಿಂದೆ ಮಾಡುತ್ತಿದ್ದಾಗ ಬರುತ್ತಿದ್ದ ಮೊಬಲಗಿನಷ್ಟು ಈಗ ಬರುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಈಗ ದರಗಳು ಕಮ್ಮಿಯಾಗಿವೆ. ಮಾರ್ಕೆಟ್ಟಿನಲ್ಲಿ depression ಇರುವುದರಿಂದ ಹೆಚ್ಚಿಗೆ ದರಗಳು ಸಿಕ್ಕುತ್ತಿಲ್ಲ. ಆದ್ದರಿಂದ ನಷ್ಟವಾಗುತ್ತಿದೆ.

ಶ್ರೀ ಡಿ. ದೇವರಾಜ್ ಅರಸ್.—ಈಗ ಹಾಲಿಯಿರುವ ಮಾರ್ಕೆಟ್ ದರಗಳೇನು ?

ಶ್ರೀ ಟಿ. ಚನ್ನಯ್ಯ.—ಉತ್ತರದಲ್ಲೇ ಕೊಟ್ಟಿದೆ.

ಶ್ರೀ ಡಿ. ದೇವರಾಜ್ ಅರಸ್.—1952ನೆಯ ಇಸವಿಯಲ್ಲಿ 'the Rates were Rs. 30 per maund for Sagade and Bore crude lac and Rs. 20 for Jalari crude lac' ಎಂದು ಹೇಳಿದೆ. What is the rate during this year ? Because it varies from year to year. That is what is stated.

(ಉತ್ತರವಿಲ್ಲ).

Restoration of Gunjiganur tank in Holalkere Taluk.

Q.—120. Sri G. DUGGAPPA (Holalkere—Scheduled Castes).—

Will the Government be pleased to state :—

(*a*) whether an estimate for the restoration of Gunjiganur tank in Holalkere Taluk was prepared ;

(*b*) whether the same has been submitted to Government for sanction ;

(*c*) whether it is a fact that the villagers are urging for the restoration of this tank since 1946 ?

A.— Sri KADIDAL MANJAPPA (Minister for Revenue and Public Works).—

(*a*) Yes.

(*b*) Not yet.

(*c*) Yes, there have been representations.

ಶ್ರೀ ಜಿ. ದುಗ್ಗಪ್ಪ.—ಅಂದಾಜು ತಯಾರಿಸಲ್ಪಟ್ಟಿದೆಯೆಂದು ಹೇಳಿದ್ದೀರಿ. ಅಂದಾಜು ಆಗಿ ಎಷ್ಟು ದಿವಸವಾಯಿತು ?

ಶ್ರೀ ಕಡಿದಾಳ್ ಮಂಜಪ್ಪ.— Recently ಎಂದು ಹೇಳಬಹುದು.

ಶ್ರೀ ಜಿ. ದುಗ್ಗಪ್ಪ.—ಎಷ್ಟು ರೂಪಾಯಿಗಳಿಗೆ ಅಂದಾಜು ಆಗಿದೆ?

ಶ್ರೀ ಕಡಿದಾಳ್ ಮಂಜಪ್ಪ.—24,000 ರೂಪಾಯಿಗಳಿಗೆ.

ಶ್ರೀ ಜಿ. ದುಗ್ಗಪ್ಪ.—1946ನೆಯ ಇಸವಿಯಿಂದ ಮನವಿಗಳು ಬರುತ್ತಿವೆಯೆಂದು ಹೇಳಿದ್ದೀರಿ. ಅಂದಾಜು ತಯಾರುಮಾಡಬೇಕಾದರೆ ಇಷ್ಟು ವರ್ಷಗಳು ಬೇಕಾಯಿತೇ ?

ಶ್ರೀ ಕಡಿದಾಳ್ ಮಂಜಪ್ಪ.—ಮನವಿ ಬಂದಕೂಡಲೆ ತಯಾರುಮಾಡುವುದಕ್ಕಾಗುವುದಿಲ್ಲ. ಸಾಧಕಬಾಧಕಗಳನ್ನು ನೋಡಿ ಪುರುಮಾಡಬೇಕಾಗುತ್ತದೆ.

ಶ್ರೀ ಜಿ. ದುಗ್ಗಪ್ಪ. ಸರ್ಕಾರಕ್ಕಿನ್ನೂ ಈ ಅಂದಾಜು ಬಂದಿಲ್ಲವೇ ?

Mr. SPEAKER.—There is the answer for (*b*) : 'Not yet.'

ಶ್ರೀ ಜಿ. ದುಗ್ಗಪ್ಪ.—ಆದಷ್ಟು ಜಾಗ್ರತೆಮಾಡಿ ಕೊಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇರಿಗೇಷನ್ ಆಕ್ಟ್ ಪ್ರಕಾರ enquiry ಗೆ ಹೋಗಿದೆ. ಅಲ್ಲಿಂದ ಬಂದಮೇಲೆ ಕೂಡಲೆ ಪರಿಶೀಲನೆಮಾಡುತ್ತೇವೆ.

Repairs to Anecut across Vatehalla flowing near Channapurada Thimmanahalli.

Q.—175. Sri H. K. SIDDAIYA (Belur—Scheduled Castes).—

Will the Government be pleased to state :—

(*a*) whether it has come to their notice that the anecut across the